

ಮೈಸೂರು ದಸರಾ ವೇದಿಕೆಯಲ್ಲಿ 'ಮಹಿಷ ಮರ್ದಿನಿ' ಯಕ್ಷಗಾನ ಪ್ರದರ್ಶಿಸಿದ ಮಂಡೆಕೋಲು ಗ್ರಾಮ ಪಂಚಾಯಿತಿ ಗ್ರಂಥಾಲಯದ ತಂಡ



ಕಬ್ಬನ್‌ಪಾರ್ಕ್‌ನಲ್ಲಿರುವ ರಾಜ್ಯ ಕೇಂದ್ರ ಗ್ರಂಥಾಲಯ
ಚಿತ್ರ: ಎಂ.ಎಸ್. ಮಂಜುನಾಥ್

ಮಗುವಿನ ಮನೆಗೆ ಪತ್ರ ಬರೆದು ಅಭಿನಂದಿಸಿದರು. ಪತ್ರ ಬರೆಯುವ ಅಭಿಯಾನದ ವೇಳೆ ಈ ಗ್ರಂಥಾಲಯಕ್ಕೆ ಬರುತ್ತಿದ್ದ ಕೆಲ ಮಕ್ಕಳು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿದ್ದ ಉಮಾ ಮಹಾದೇವನ್ ಅವರಿಗೆ ಪತ್ರ ಬರೆದರು. ಆ ಪತ್ರಗಳನ್ನು ಮೆಚ್ಚಿ ಉಮಾ ಮಹಾದೇವನ್ ಅವರು ಆ ಮಕ್ಕಳು ಕಲಿಯುವ ಶಾಲೆಗಳಿಗೆ ಪತ್ರ ಬರೆದು ಹುರಿದುಂಬಿಸಿದರು. ಶಾಲೆಯಲ್ಲಿ ಆ ಮಕ್ಕಳಿಗೆ ಮೆಚ್ಚುಗೆ ದೊರೆಯಿತು. ಎಲ್ಲ ಮಕ್ಕಳು ಈ ಗ್ರಂಥಾಲಯಕ್ಕೆ ಬರಲು ಇವೆಲ್ಲವೂ ಪ್ರೇರಣೆಯಾದವು. ಕೆಲ ದಾನಿಗಳು ಇನ್ವರ್ಟರ್, ಪುಸ್ತಕ, ಕೇರಂ ಬೋರ್ಡ್ ಸೇರಿದಂತೆ ಆಟೋಪಕರಣಗಳನ್ನು ಗ್ರಂಥಾಲಯಕ್ಕೆ ದೇಣಿಗೆಯಾಗಿ ನೀಡಿದರು. ಗ್ರಾಮ ಪಂಚಾಯಿತಿ ಆಡಳಿತ, ಅಧಿಕಾರಿ ವರ್ಗದಿಂದಲೂ ಬೆಂಬಲ ದೊರೆಯಿತು. ಗ್ರಂಥಾಲಯಕ್ಕೊಂದು ಸುಸಜ್ಜಿತ ಕಟ್ಟಡ ನಿರ್ಮಾಣವಾಯಿತು. ಇದೀಗ ಡಿಜಿಟಲ್ ಗ್ರಂಥಾಲಯವಾಗಿ ರೂಪುತಳೆದಿದೆ.

ಸಂಗೀತ–ಯೋಗ, ಕೇರಂ, ಚೆಸ್, ಸ್ಪೋಕನ್ ಇಂಗ್ಲಿಷ್, ಬೇಸಿಗೆ ಶಿಬಿರ ಹೀಗೆ ವಿವಿಧ ತರಬೇತಿಗಳು ಇಲ್ಲಿ ನಿರಂತರವಾಗಿ ನಡೆಯುತ್ತಿವೆ.

ಸುಳ್ಯದ ಮೊಂಟೆಸ್ಸರಿ ವಿದ್ಯಾ ಸಂಸ್ಥೆಯ ಸಂಚಾಲಕಿ ಗೀತಾಂಜಲಿ ಟಿ.ಜಿ. ಅವರು ಪ್ರತಿ ಬುಧವಾರ ಇಲ್ಲಿ ಸಂವಹನ ಕೌಶಲ ಮತ್ತು ಇಂಗ್ಲಿಷ್ ಸ್ಪೀಕಿಂಗ್ ತರಬೇತಿಯನ್ನು ಮಕ್ಕಳು ಮತ್ತು ಸಾರ್ವಜನಿಕರಿಗೆ ಉಚಿತವಾಗಿ ನೀಡುತ್ತಿದ್ದಾರೆ.

2022ನೇ ಸಾಲಿನಲ್ಲಿ ಈ ಗ್ರಂಥಾಲಯದ ಚಟುವಟಿಕೆಗಳನ್ನು ತಿಳಿದುಕೊಂಡ ಸರ್ಕಾರದ ಹೆಚ್ಚುವರಿ ಮುಖ್ಯಕಾರ್ಯದರ್ಶಿಯಾಗಿದ್ದ ಉಮಾ ಮಹಾದೇವನ್ (ಈಗ ಅಭಿವೃದ್ಧಿ ಆಯುಕ್ತೆ), ಈ ಗ್ರಂಥಾಲಯದಲ್ಲಿ ಆರಂಭಿಸಿದ್ದ ಅಮ್ಮನಿಗೊಂದು ಪುಸ್ತಕ ಕಾರ್ಯಕ್ರಮವನ್ನು ರಾಜ್ಯವ್ಯಾಪಿ ವಿಸ್ತರಿಸಲು ಕಾರಣರಾದರು. ರಾಜ್ಯದ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಲ್ಲಿ ಅಮ್ಮನಿಗೊಂದು ಪುಸ್ತಕ ಕಾರ್ಯಕ್ರಮ ಕಾರ್ಯಗತಗೊಂಡಿತು.

ಈ ಗ್ರಂಥಾಲಯ ಪಠ್ಯೇತರ ಚಟುವಟಿಕೆ,



ಮಕ್ಕಳ ಕಲಿಕೆಗೆ ನೆರವಾಗುತ್ತಿರುವ ಸಾವಿತ್ರಿ ರಾಮ್ ಕಣೆಮರಡ್ಕ ಚಿತ್ರ: ಲೋಕೇಶ್ ಪೆರ್ಲಂಪಾಡಿ

ಯಕ್ಷಗಾನದಂತಹ ಯೋಜನೆ, ತಾಯಂದಿರಿಗೆ ಸ್ವ ಉದ್ಯೋಗಕ್ಕೆ ಪ್ರೇರಣೆ ನೀಡುವ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದೆ. ಸಮುದಾಯದೊಂದಿಗಿನ ಬೆಸುಗೆಯನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಗ್ರಂಥಾಲಯದಲ್ಲಿ ಓಣಂ, ಆಟಿ ಕೂಟ (ಆಷಾಢ ಉತ್ಸವ)ದಂತಹ ಸ್ಥಳೀಯ ಹಬ್ಬಗಳನ್ನೂ ಆಚರಿಸಲಾಗುತ್ತಿದೆ. ಈ ಗ್ರಂಥಾಲಯವೀಗ ಊರವರ ಪೋಷಣೆಯಲ್ಲಿ ಬೆಳೆಯುತ್ತಲೇ ಇದೆ.

## ಯಕ್ಷಗಾನ ತಂಡ!

ಮಂಡೆಕೋಲು ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಯಕ್ಷಗಾನ ತರಬೇತಿ ನಡೆಯುತ್ತಿದ್ದು, ಬೇರೆ ಬೇರೆ ಶಾಲೆಗಳ 40ಕ್ಕೂ ಹೆಚ್ಚು ಮಕ್ಕಳು ಕಲಿಯುತ್ತಿದ್ದಾರೆ. ಯಕ್ಷಗುರು ಯೋಗೀಶ್ ಶರ್ಮ ಅಳದಂಗಡಿ ಇಲ್ಲಿ ಮೂರು ವರ್ಷಗಳಿಂದ ಸ್ವಯಂಪ್ರೇರಿತರಾಗಿ ತರಬೇತಿ ನೀಡುತ್ತಿದ್ದಾರೆ.

ಪ್ರತಿ ಭಾನುವಾರ ಈ ಗ್ರಂಥಾಲಯದಲ್ಲಿ ಯಕ್ಷ ತರಬೇತಿ ನಡೆಯುತ್ತಿದೆ. 7ರಿಂದ 15 ವರ್ಷ ವಯಸ್ಸಿನ ಮಕ್ಕಳಿಗೆ ಭಾಗವತಿಕೆ, ಅರ್ಥಗಾರಿಕೆ, ನೃತ್ಯ ಕಲಿಕೆ, ಚೆಂಡೆ ತರಬೇತಿ ನೀಡಲಾಗುತ್ತಿದೆ. ಈ ಗ್ರಂಥಾಲಯದಲ್ಲಿ ಕಲಿಯುತ್ತಿರುವ ಎಲ್ಲ ಮಕ್ಕಳ ರಂಗ ಪ್ರವೇಶ ಆಗಿದೆ. ಮೂರನೇ ಯಕ್ಷಪ್ರಯೋಗ ಮೈಸೂರು ದಸರಾ ವೇದಿಕೆಯಲ್ಲಿ ಇದೇ ವರ್ಷ ನಡೆದಿದೆ. ಈ ಗ್ರಂಥಾಲಯದಲ್ಲಿ ತರಬೇತಿ ಪಡೆದ 25 ಮಕ್ಕಳು 'ಮಹಿಷ ಮರ್ದಿನಿ' ಯಕ್ಷಗಾನ ಪ್ರದರ್ಶನ ನೀಡಿದ್ದಾರೆ. ಪ್ರಮಾಣ ಪತ್ರದ ಜೊತೆಗೆ ₹40 ಸಾವಿರ ಸಂಭಾವನೆಯೂ ಈ ತಂಡಕ್ಕೆ ಸಿಕ್ಕಿದೆ. ತಮ್ಮ ಮಕ್ಕಳಿಗೆ ದೊಡ್ಡ ವೇದಿಕೆ ಸಿಕ್ಕಿದ್ದಕ್ಕೆ ಇಡೀ ಊರೇ ಸಂಭ್ರಮಿಸುತ್ತಿದೆ.

'ಈ ಗ್ರಂಥಾಲಯದಲ್ಲಿ ಕಲಿಯುವ ಮಕ್ಕಳಿಗೂ ನನಗೂ ಭಾವನಾತ್ಮಕ ಸಂಬಂಧ. ಯಕ್ಷಗಾನದ ಗಂಧಗಾಳಿ ಗೊತ್ತಿಲ್ಲದ ಮಕ್ಕಳನ್ನು ನಾವೀಗ ಮೈಸೂರು ದಸರಾ ವೇದಿಕೆಯಲ್ಲಿ ಪ್ರದರ್ಶನ ನೀಡುವ ಮಟ್ಟಕ್ಕೆ ಸಿದ್ಧಗೊಳಿಸಿದ್ದೇವೆ. ಒಂದರ್ಥದಲ್ಲಿ ಶೂನ್ಯದಿಂದ ಶಿಖರಕ್ಕೇರಿದ ಅನುಭವ. ಗ್ರಂಥಪಾಲಕಿ ಸಾವಿತ್ರಿ ಮತ್ತು ಮಕ್ಕಳ ಪಾಲಕರ ಸಹಕಾರದಿಂದ ತಂಡ ಕಟ್ಟಲು ಸಾಧ್ಯವಾಯಿತು' ಎನ್ನುತ್ತಾರೆ ಯಕ್ಷಗುರು ಯೋಗೀಶ್ ಶರ್ಮ ಅಳದಂಗಡಿ.

ಯಕ್ಷಗಾನ ಕಲಿಕೆಯಿಂದ ನಮ್ಮ ಭಾಷೆ ಮತ್ತು ಉಚ್ಚಾರ ಶುದ್ಧವಾಗಿದೆ. ಪಠ್ಯದ ಕಂಠಪಾಠಕ್ಕೂ ನೆರವಾಗಿದೆ ಎನ್ನುತ್ತಾರೆ ವಿದ್ಯಾರ್ಥಿಗಳಾದ ಶ್ರದ್ಧಾ, ಲಕ್ಷಜೀತ್ ರೈ.

## ಸ್ವ ಉದ್ಯೋಗಕ್ಕೆ ಪ್ರೇರಣೆ

'ಅಮ್ಮನಿಗೊಂದು ಪುಸ್ತಕ' ಪರಿಕಲ್ಪನೆ ಅಮ್ಮಂದಿರಿಗೆ ಸ್ವ ಉದ್ಯೋಗದ ಹಾದಿಯನ್ನೂ ಹುಡುಕಿಕೊಟ್ಟಿದೆ. ಬಿಡುವಿನ ವೇಳೆಯಲ್ಲಿ ಈ ಗ್ರಂಥಾಲಯಕ್ಕೆ ಓದಲು ಬರುತ್ತಿದ್ದ ಮಹಿಳೆಯರು, 'ಸಮನ್ವಿತ' ಹೆಸರಿನಲ್ಲಿ ಸ್ವಸಹಾಯ ಸಂಘ ಕಟ್ಟಿಕೊಂಡಿದ್ದಾರೆ. ಸಂಜೀವಿನಿ ಒಕ್ಕೂಟ ಸೇರಿ, ಗೃಹೋತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಈ ತಂಡದವರು ತಮ್ಮ ಮನೆಗಳಲ್ಲೇ ಬೆಳೆಯುವ ಹಲಸು ಬಳಸಿಕೊಂಡು ಹಲಸಿನ ಚಿಪ್ಸ್ ತಯಾರಿಸಿ ಮಾರಾಟ ಆರಂಭಿಸಿದರು. ಈಗ ಬಟ್ಟೆ ಚೀಲ ಹೊಲಿಗೆಯಲ್ಲಿ ತೊಡಗಿದ್ದಾರೆ. ಆಯಾ ಋತುಮಾನದಲ್ಲಿ ಸ್ಥಳೀಯವಾಗಿ ಲಭಿಸುವ ವಸ್ತುಗಳನ್ನು ಬಳಸಿಕೊಂಡು ತಿನಿಸು ತಯಾರಿಸಿ ಮಾರಾಟ ಮಾಡುವ ಗುರಿ ಇದೆ ಎನ್ನುತ್ತಾರೆ ಸಾವಿತ್ರಿ.